## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 100(375)
ಮಾನ್ಯ ಸದಸ್ಯರ ಹೆಸರು : ಶ್ರೀ ಬಿ.ಎಂ.ಫಾರೂಖ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 05.12.2023
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1 | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ "ಜೆಸ್ಕೋ" ಗೆ ಹಂಚಿಕೆಯಾದ ಭೂಮಿ ಇನ್ನು ಅಭಿವೃದ್ಧಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ಕಂಪನಿಯು ತಮ್ಮ ಉದ್ದೇಶಿತ ಯೋಜನೆಯನ್ನು ಅನುಷ್ಠಾನ ಗೊಳಿಸಲು ಯಾವುದೇ ಕ್ರಮವಹಿಸದ ಕಾರಣ, ಸರ್ಕಾರದ ಆದೇಶ ಸಂ:ಸಿಐ 175 ಎಸ್ ಪಿ ಐ 2011 ದಿನಾಂಕ:11-11-2013 ರಲ್ಲಿ ಮೆ:ಜೆಸ್ಕೋ ರವರಿಗೆ ಹಂಚಿಕೆಯಾದ ಜಮೀನಿನ ಹಂಚಿಕೆಯನ್ನು ರದ್ದುಪಡಿಸಿ ಮಂಡಳಿಗೆ ಹಿಂಪಡೆಯಲು ಆದೇಶಿಸಿರುತ್ತದೆ. |
| 2 | ಹಾಗಿದ್ದಲ್ಲಿ ಜೆಸ್ಕೋ ಕಂಪನಿಗೆ ಹಂಚಿಕೆಯಾದ 339 ಎಕರೆ ಭೂಮಿ ಯನ್ನು ಶೀಘ್ರ ಹಿಂಪಡೆಯುವ ವಿಚಾರವಾಗಿ ಸರ್ಕಾರದ ಯೋಜನೆಗಳೇನು; | ಅದರಂತೆ, ಮಂಡಳಿಯು ಮೆ:ಜೆಸ್ಕೋ ರವರಿಗೆ ದಿನಾಂಕ: 10-01-2014ರಂದು ಕೆಐಎಡಿ ಕಾಯ್ದೆ ಕಲಂ 34ಬಿರಡಿ ನೋಟಿಸ್ ನೀಡಲಾಗಿತ್ತು. ಸದರಿ ಸರ್ಕಾರಿ ಆದೇಶವನ್ನು ಪ್ರಶ್ನಿಸಿ ಕಂಪನಿಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ:57644/2013 ರಲ್ಲಿ ಪ್ರಕರಣ ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:14-06-2017ರ ಆದೇಶದಲ್ಲಿ ಸದರಿ ರಿಟ್ ಅರ್ಜಿಯನ್ನು ವಿಲೇ ಮಾಡಿ ಅರ್ಜಿದಾರರು ದಿನಾಂಕ: 16-08-2013 ರಂದು ಯೋಜನೆ ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ನೀಡಲು ಕೋರಿರುವ ಮನವಿಯನ್ನು ಪರಿಗಣಿಸಲು ನಿರ್ದೇಶಿಸಿರುತ್ತದೆ.<br><br>ಅದರಂತೆ, ದಿನಾಂಕ:31-08-2017 ರಂದು ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ ಸಭೆಯಲ್ಲಿ ಕಂಪನಿಯವರ ಮನವಿಯನ್ನು ನಿರ್ಣಯಕ್ಕಾಗಿ ಮಂಡಿಸಿದ್ದು, ಸದರಿ ಸಭೆಯಲ್ಲಿ ಕಂಪನಿಯ ಮನವಿಯನ್ನು ತಿರಸ್ಕರಿಸಲು ನಿರ್ಣಯಿಸಿರುತ್ತದೆ ಹಾಗೂ ಅವರ ಸ್ವಾಧೀನ ದಲ್ಲಿರುವ 548.70 ಎಕರೆ ಜಮೀನನ್ನು ಮಂಡಳಿಗೆ ಹಿಂಪಡೆಯಲು ನಿರ್ದೇಶಿಸಿರುತ್ತದೆ. ದಿನಾಂಕ: 04-11-2017 ರಂದು ನಡೆದ ಕೆಐಎಡಿ ಮಂಡಳಿ ಸಭೆಯಲ್ಲೂ ಸಹ ಜಮೀನು ಹಿಂಪಡೆಯಲು ನಿರ್ಣಯಿಸಿರುತ್ತದೆ. |

| | | |
|---|---|---|
| | | ಈ ನಿರ್ಣಯಗಳಂತೆ ಮೆ:ಜೆಸ್ಕೋ ರವರ ಸ್ವಾಧೀನದಲ್ಲಿದ್ದ 548.70 ಎಕರೆ ಜಮೀನನ್ನು ಹಿಂಪಡೆಯಲಾಗಿದೆಯೆಂದು ತಿಳಿಸಿ, ಕೆಐಎಡಿ ಕಾಯ್ದೆ ಕಲಂ 34ಬಿ ರಡಿ ದಿನಾಂಕ:14-11-2017 ರಂದು ನೋಟಿಸ್ ನೀಡಿ, ದಿನಾಂಕ: 22-11-2017ರಂದು ಮಂಡಳಿಯ ವಶಕ್ಕೆ ಪಡೆಯಲಾಗಿದೆ.<br><br>ಮೆ:ಜೆಸ್ಕೋ ರವರು ಜಮೀನು ಹಿಂಪಡೆದಿರುವುದನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ: 52937/ 2017 ರಡಿ ಪ್ರಕರಣ ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ಸದರಿ ಪ್ರಕಣದಲ್ಲಿ ದಿನಾಂಕ:22-11-2017ರ ಮಧ್ಯಂತರ ಆದೇಶದಲ್ಲಿ ಯಥಾಸ್ಥಿತಿ ಕಾಪಾಡಲು ನಿರ್ದೇಶಿ ರುತ್ತದೆ. ಸದರಿ ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುತ್ತದೆ.<br><br>ಸದರಿ ಕಂಪನಿಯು ದಿನಾಂಕ:31-08-2017 ರಂದು ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ ಸಭೆಯ ನಡವಳಿಯನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮತ್ತೊಂದು ರಿಟ್ ಅರ್ಜಿ ಸಂ:566/2018 ರಡಿ ಪ್ರಕರಣ ದಾಖಲಿಸಿರುತ್ತಾರೆ.<br><br>ಮುಂದುವರೆದು, ದಿನಾಂಕ:11-12-2017 ರಂದು ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ ಸಭೆಯಲ್ಲಿ, ಮೆ:ಇಂಡಿಯನ್ ಕೋಸ್ಟ್ ಗಾರ್ಡ್ (ಭಾರತ ಸರ್ಕಾರದ ಅಧೀನದ ಸಂಸ್ಥೆ) ರವರಿಗೆ ಇಂಡಿಯನ್ ಕೋಸ್ಟ್ ಗಾರ್ಡ್ ಟ್ರೈನಿಂಗ್ ಸೆಂಟರ್ ಸ್ಥಾಪನೆಗೆ ಮೆ:ಜೆಸ್ಕೋ ರವರಿಂದ ಹಿಂಪಡೆದ 548.70 ಎಕರೆ ಜಮೀನಿನ ಪೈಕಿ ದಕ್ಷಿಣ ಕನ್ನಡ ಜಿಲ್ಲೆ, ಬೈಕಂಪಾಡಿ ಗ್ರಾಮದಲ್ಲಿ 160 ಎಕರೆ ಜಮೀನನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿನ ರಿಟ್ ಅರ್ಜಿ ಸಂ:52937/ 2017 ರ ಅಂತಿಮ ಆದೇಶಕ್ಕೆ ಬದ್ಧರಾಗಿರುವ ಷರತ್ತಿಗೆ ಒಳಪಟ್ಟು ಹಂಚಿಕೆ ಮಾಡಲು ನಿರ್ಣಯಿಸಿರುತ್ತದೆ.<br><br>ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಮೆ:ಜೆಸ್ಕೋ ರವರು ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ:52937/2017 ಮತ್ತು 566/2018 ಗಳನ್ನು ಒಟ್ಟುಗೂಡಿಸಿ ದಿನಾಂಕ: 23-04-2018ರ ಮಧ್ಯಂತರ ಆದೇಶದಲ್ಲಿ ಮೆ:ಇಂಡಿಯನ್ ಕೋಸ್ಟ್ ಗಾರ್ಡ್ ರವರ ಯೋಜನೆಯು ರಾಷ್ಟ್ರೀಯ ಭದ್ರತಾ ಹಿತಾಸಕ್ತಿಯಾಗಿರುವುದೆಂದು ಪರಿಗಣಿಸಿ, ಇವರಿಗೆ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಕೆಂಜಾರು ಗ್ರಾಮದಲ್ಲಿ ಮೆ:ಜೆಸ್ಕೋ ರವರಿಂದ ಹಿಂಪಡೆದ ಜಮೀನಿನ ಪೈಕಿ 160 ಎಕರೆ ಜಮೀನನ್ನು ಹಂಚಿಕೆ ಮಾಡಿರುವುದನ್ನು ಮುಂದುವರೆಯಲು ಆದೇಶಿಸಿರುತ್ತದೆ. |

| | | |
|---|---|---|
| | | ಈ ಮಧ್ಯೆ, ಮೆ: ಜೆಸ್ಕೋ ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮತ್ತೊಂದು ರಿಟ್ ಅರ್ಜಿ ಸಂಖ್ಯೆ:41829/2019 ಪ್ರಕರಣವನ್ನು ದಾಖಲಿಸಿ ಮೆ:ಇಂಡಿಯನ್ ಕೋಸ್ಟ್ ಗಾರ್ಡ್ ರವರಿಗೆ ಜಮೀನು ಹಂಚಿಕೆ ಮಾಡಲು ಯೋಜನೆ ಅನುಮೋದಿಸಿರುವುದನ್ನು ಪ್ರಶ್ನಿಸಿ ಮತ್ತು ಜಮೀನು ಹಂಚಿಕೆ ಪ್ರಶ್ನಿಸಿ ರಿಟ್ ಅರ್ಜಿ ದಾಖಲಿಸಿರುತ್ತಾರೆ.<br><br>ಸರ್ಕಾರದ ಅನುಮೋದನೆ ಪಡೆದು ಮೆ:ಇಂಡಿಯನ್ ಕೋಸ್ಟ್ ಗಾರ್ಡ್ ರವರಿಗೆ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಕೆಂಜಾರು ಗ್ರಾಮದಲ್ಲಿ ಎಕರೆಗೆ ರೂ.175 ಲಕ್ಷಗಳಂತೆ ದಿನಾಂಕ:04-08-2020 ರಂದು 153.5435 ಎಕರೆ ಜಮೀನು ಹಂಚಿಕೆ ಮಾಡಿ, ದಿನಾಂಕ:19-09-2020 ರಂದು ಸ್ವಾಧೀನ ಪತ್ರ ನೀಡಿ, ದಿನಾಂಕ:19-03-2021 ರಂದು ಶುದ್ಧಕ್ರಯ ಪತ್ರ ನೆರವೇರಿಸಲಾಗಿದೆ.<br><br>ಮೆ:ಜೆಸ್ಕೋ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ:52937/2017, 566/2018 ಮತ್ತು 41829/2019 ಪ್ರಕರಣಗಳು ವಿವಿಧ ದಿನಾಂಕ ಗಳಂದು ವಿಚಾರಣೆಗೆ ಬಂದಿದ್ದು, ಇತ್ಯರ್ಥಕ್ಕೆ ಬಾಕಿ ಇರುತ್ತವೆ. ಈ ಪ್ರಕರಣಗಳು ಇತ್ಯರ್ಥ ಗೊಂಡ ನಂತರ, ಮುಂದಿನ ಕ್ರಮವಹಿ ಸಲಾಗುತ್ತದೆ. |
| 3 | ಸದರಿ ವಿಚಾರವು ಕಾನೂನಾತ್ಮಕ ಪ್ರಕರಣವಾಗಿ ನ್ಯಾಯಾಲಯದಲ್ಲಿದ್ದು, ತ್ವರಿತಗತಿಯಲ್ಲಿ ಈ ಪ್ರಕರಣವನ್ನು ಮುಕ್ತಾಯಗೊಳಿಸುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; (ಸಂಪೂರ್ಣ ವಿವರ ನೀಡುವುದು) | ಮೆ:ಜೆಸ್ಕೋ ರವರು ಈವರೆಗೆ ಮಾನ್ಯ ಉಚ್ಚನ್ಯಾಯಾಲಯದ ಮುಂದೆ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ:52937/2017, 566/2018 ಮತ್ತು 41829/2019 ಪ್ರಕರಣಗಳನ್ನು ದಾಖಲಿಸಿದ್ದು, ಮಂಡಳಿಯನ್ನು ಅನೇಕ ಪ್ರಕರಣಗಳಲ್ಲಿ ಪ್ರತಿನಿಧಿಸಿದ್ದು, ಅನುಭವ ಹೊಂದಿರುವ ವಕೀಲರಾದ ಶ್ರೀ.ಬಿ.ವಿ ಸಬರದ್ ರವರು ಮಂಡಳಿಯ ಪರ ಪ್ರತಿನಿಧಿಸಿರುತ್ತಾರೆ. ಅಲ್ಲದೆ, ಈ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಲು ಹಿರಿಯ ವಕೀಲರಾದ ಶ್ರೀ.ಉದಯ ಹೊಳ್ಳ ರವರ ಸೇವೆಯನ್ನು ಸಹ ಪಡೆಯಲಾಗಿದೆ. ಸದರಿ ಪ್ರಕರಣಗಳು ದಿನಾಂಕ:13-03-2023, 29-03-2023, 06-04-2023 ಮತ್ತು 11-04-2023ರಂದು ಮಾನ್ಯ ಉಚ್ಚನ್ಯಾಯಾಲಯದ ಮುಂದೆ ವಿಚಾರಣೆಗೆ ಬಂದಿದ್ದು, ಪುನಃ ಮಾನ್ಯ ನ್ಯಾಯಾಲಯವು ವಿಚಾರಣೆಯನ್ನು ಮುಂದೂಡಿದೆ. ಮಂಡಳಿಯಿಂದ ಈ ಪ್ರಕರಣಗಳನ್ನು ಮುಕ್ತಾಯ ಗೊಳಿಸಲು ಹಿರಿಯ ವಕೀಲರ ಸೇವೆ ಪಡೆದು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| 4 | ಇಷ್ಟು ಪ್ರಮಾಣದ ಭೂಮಿಯನ್ನು ಅನೇಕ ಹೊಸ ಉದ್ಯಮ ಕೈಗಾರಿಕೆಗಳಿಗೆ ಹಂಚುವುದರಿಂದ ಉದ್ಯಮ ವಲಯಕ್ಕೆ ರಾಜ್ಯದ ಆರ್ಥಿಕತೆ, ಹೊಸ ಉದ್ಯೋಗ ಅಭಿವೃದ್ಧಿಗೆ ಬಹಳ ಅನುಕೂಲ ವಾಗುವುದನ್ನು ಸರ್ಕಾರ ಗಮನಕ್ಕೆ ತೆಗೆದು ಕೊಳ್ಳುವುದೇ; | ಮೆ:ಜೆಸ್ಕೋ ರವರು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಮುಂದೆ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ:52937/2017, 566/2018 ಮತ್ತು 41829/2019 ಪ್ರಕರಣಗಳು ಇತ್ಯರ್ಥವಾದ ನಂತರ, ಮುಂದಿನ ಕ್ರಮವಹಿಸಲಾಗುತ್ತದೆ. |
| 5 | ಹೌದಾದಲ್ಲಿ, ಜೆಸ್ಕೋಲ್ಯಾಂಡ್‌ನ್ನು ಹಿಂಪಡೆದು ನೂತನ ಕೈಗಾರಿಕೆಗಳಿಗೆ ಹಂಚುವ ಕುರಿತಾಗಿ ಸರ್ಕಾರದ ಖಚಿತ ನಿಲುವು ಕಾರ್ಯಯೋಜನೆ ಗಳೇನು? (ಅಂಕಿ ಅಂಶಗಳೊಂದಿಗೆ ವಿವರ ನೀಡುವುದು) | |

**ಸಂಖ್ಯೆ: ಸಿಐ 297 ಐಎಪಿ 2023**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**